**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾವೇರಿ.**
**ಸಿಸಿ ನಂಬರ್62/2020**

ಫಿರ್ಯಾದಿಃ ಸರಕಾರ (ಹಾವೇರಿ ಮಹಿಳಾ ಪೊಲೀಸ್ ಠಾಣೆ).

ವಿರುದ್ದ

ಆರೋಪಿತಃ ಹನುಮಂತಪ್ಪ ನಿಂಗಪ್ಪ ಮುದಿಯಪ್ಪನವರ
ವಯಾಃ **45** ವರ್ಷ, ಉದ್ಯೋಗ ಃ ಖಾಸಗಿ ಶಾಲಾ ಶಿಕ್ಷಕ
ಸಾಃ ಗುಡಸಲಕೊಪ್ಪ ತಾಃ ಹಾವೇರಿ ಜಿಃ ಹಾವೇರಿ

## ದೋಷಾರೋಪಣೆ

ಇದರಲ್ಲಿ ಶ್ರೀ ಲಕ್ಷ್ಮಣ ರಾಮು ಕುರಣೆ, ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು ಹಾವೇರಿ ಆದ ನಾನು ಆರೋಪಿತನಾದ ನಿನ್ನ ಮೇಲೆ ದೋಷಾರೋಪಣೆ ಮಾಡುವುದೇನೆಂದರೆ,

ಆರೋಪಿತನಾದ ನೀನು ಚಾ.ಸಾ-1 ಇವಳೊಂದಿಗೆ ದಿನಾಂಕಃ 28.05.2020 ರಂದು ಹಿಂದೂ ಸಂಪ್ರದಾಯದ ಅಂಗವಾಗಿ ಗುರು ಹಿರಿಯರ ಸಮ್ಮುಖದಲ್ಲಿ ಗುತ್ತಲದ ಸಂಗನ ಬಸವ ಕಲ್ಯಾಣ ಮಂಟಪದಲ್ಲಿ ಮದುವೆಯಾಗಿದ್ದು, ಮದುವೆಯಾಗದ ನಂತರ ಗಂಡ ಹೆಂಡತಿ ಇಬ್ಬರೂ ಹೊಸರಿತ್ತಿ ಗ್ರಾಮದ ಚಾ.ಸಾಃ 9 ನೇದ್ದವರ ಮನೆಯಲ್ಲಿ ಬಾಡಿಗೆ ಇದ್ದಾಗ ಆರೋಪಿತನಾದ ನೀನು ದಿನಾಲೂ ಕುಡಿದ್ದು ಬಂದು ಚಾ.ಸಾ-1 ನೇದ್ದವಳಿಗೆ ದೈಹಿಕವಾಗಿ ಹಾಗೂ ಮಾನಸಿಕವಾಗಿ ಹಿಂಸೆ ನೀಡಿ **ಭಾರತೀಯ ದಂಡ ಸಂಹಿತೆ ಕಲಂ *498-A*** ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಅಪರಾಧ ಎಸಗಿರುತ್ತೀರಿ ಎಂದು ಅಪಾದನೆ.

ದಿನಾಂಕಃ04-03-2019 ರಂದು ರಾತ್ರಿ 8-00 ಗಂಟೆಗೆ ಚಾ.ಸಾ-1 ಇವಳು ಹಾವೇರಿಯ ಶಿವಯೋಗೇಶ್ವರ ನಗರದಲ್ಲಿರುವ ತನ್ನ ತವರು ಮನೆಯಲ್ಲಿ ಇರುವಾಗ ಆರೋಪಿತನಾದ ನೀನು ಕುಡಿದ್ದು ಬಂದು ಚಾ.ಸಾ-1 ಇವಳಿಗೆ ಕೈಯಿಂದ ಹೊಡೆಬಡಿ ಮಾಡಿ **ಭಾರತೀಯ ದಂಡ ಸಂಹಿತೆ ಕಲಂ *323*** ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಅಪರಾಧ ಎಸಗಿರುತ್ತೀರಿ ಎಂದು ಅಪಾದನೆ.

ಆರೋಪಿತನಾದ ನೀನು ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಚಾ.ಸಾ-6 ಮತ್ತು 7 ನೇದ್ದವರಿಗೆ ಅವಾಚ್ಯ ಶಬ್ದಗಳಿಂದ ಬೈದು **ಭಾರತೀಯ ದಂಡ ಸಂಹಿತೆ ಕಲಂ *504*** ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಅಪರಾಧ ಎಸಗಿರುತ್ತೀರಿ ಎಂದು ಅಪಾದನೆ.

ಮೇಲೆ ಹೇಳಿದ ಆಪಾದನೆ ಮೇಲೆ ನೀನು ಈ ನ್ಯಾಯಾಲಯದ ವಿಚಾರಣೆಗೆ ಗುರಿಯಾಗಿರುತ್ತೀರಿ ಎಂದು ನಿರ್ದೇಶಿಸಿದ್ದೇನೆ.

ಹಾವೇರಿ.
ದಿಃ 26.07.2021.

(ಲಕ್ಷ್ಮಣ ರಾಮು ಕುರಣೆ)
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಹಾವೇರಿ.

*1.* ಈ ಮೇಲೆ ಹೇಳಿದ ದೋಷಾರೋಪಣೆಯು ನಿನಗೆ ಅರ್ಥವಾಗಿದೆಯೇ*?*

ಉತ್ತರಃ

*2.* ಈ ಮೇಲೆ ಹೇಳಿದ ದೋಷಾರೋಪಣೆಯನ್ನು ಒಪ್ಪಿಕೊಳ್ಳುತ್ತಿಯೋ ಅಥವಾ ವಿಚಾರಣೆಯಾಗಬೇಕೆಂದು ಬಯಸುತ್ತಿಯೋ*?*

ಉತ್ತರಃ

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಹಾವೇರಿ.

ಆರೋಪಿಯ ಸಹಿಃ